**ಕರ್ನಾಟಕ ಸರ್ಕಾರದ ನಡವಳಿಗಳು**

ವಿಷಯ: ನೇಕಾರರು ನೇಕಾರಿಕೆ ಉದ್ದೇಶಕ್ಕಾಗಿ ನೇಕಾರರ ಸಹಕಾರ ಸಂಘಗಳು, ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕುಗಳು, ಪಟ್ಟಣ ಸಹಕಾರಿ ಬ್ಯಾಂಕುಗಳು, ಕೃಷಿಯೇತರ ಪತ್ತಿನ ಸಹಕಾರ ಸಂಘಗಳಿಂದ ಸಾಲ ಪಡೆದು ದಿನಾಂಕ: 30.06.2017ಕ್ಕೆ ಹೊಂದಿರುವ ಹೊರಬಾಕಿಯಲ್ಲಿ ರೂ. 50,000/-ಗಳವರೆಗಿನ ಸಾಲ ಮನ್ನಾ ಮಾಡುವ ಬಗ್ಗೆ.

ಓದಲಾಗಿದೆ: ಜವಳಿ ಅಭಿವೃದ್ಧಿ ಆಯುಕ್ತರ ಪತ್ರ ಸಂಖ್ಯೆ: ಕೈಜಇ/ಕೈಮಗ್ಗ/ಅಧೀ/ಸಾಲ ಮನ್ನಾ /2017-18, ದಿನಾಂಕ: 20.07.2017, 26.08.2017 ಹಾಗೂ 27.11.2017.

- - -

**ಪ್ರಸ್ತಾವನೆ:-**

ಕರ್ನಾಟಕ ರಾಜ್ಯದಲ್ಲಿ ಕಳೆದ 03 ವರ್ಷಗಳಿಂದ ತಲೆದೋರಿರುವ ಭೀಕರ ಬರಗಾಲದ ಹಿನ್ನೆಲೆಯಲ್ಲಿ, ರಾಜ್ಯದ ಬಹುತೇಕ ತಾಲೂಕುಗಳನ್ನು ಬರಪೀಡಿತ ಪ್ರದೇಶಗಳೆಂದು ಘೋಷಿಸಲಾಗಿದೆ. ಬರದ ಹಿನ್ನೆಲೆಯಲ್ಲಿ, ರೈತರು ಸಂಕಷ್ಟದಲ್ಲಿರುವುದನ್ನು ಮನಗಂಡು ರೈತರು ಪಡೆದ ಕೃಷಿ ಸಾಲವನ್ನು ಸರ್ಕಾರವು ಮನ್ನಾ ಮಾಡಲು ಕ್ರಮವಹಿಸಿದೆ. ಇದೇ ರೀತಿಯಲ್ಲೇ ರಾಜ್ಯದ ನೇಕಾರರು ಸಹ ಬರದ ಹಿನ್ನೆಲೆಯಲ್ಲಿ ಸಂಕಷ್ಟವನ್ನು ಅನುಭವಿಸುತ್ತಿರುವುದರಿಂದ ನೇಕಾರರು ವಿವಿಧ ಸಹಕಾರ ಬ್ಯಾಂಕುಗಳಿಂದ / ಸಂಘಗಳಿಂದ ಪಡೆದ ಸಾಲವನ್ನು ಮನ್ನಾ ಮಾಡುವಂತೆ ಕರ್ನಾಟಕ ರಾಜ್ಯ ನೇಕಾರ ಸಮುದಾಯಗಳ ಒಕ್ಕೂಟ (ರಿ), ಬೆಂಗಳೂರು, ಬಾಗಲಕೋಟೆ ಜಿಲ್ಲಾ ನೇಕಾರ ಸಹಕಾರಿ ಸಂಘಗಳ ಮಹಾಮಂಡಳ ನಿಯಮಿತ, ಅಮೀನಗಡ, ಬಾಗಲಕೋಟೆ ಜಿಲ್ಲೆ, ಬೆಳಗಾವಿ ಜಿಲ್ಲಾ ನೇಕಾರರ ಸಂಘಟನೆಗಳ ಒಕ್ಕೂಟ, ಬೆಳಗಾವಿ, ಇವರುಗಳು ಮನವಿ ಸಲ್ಲಿಸಿ ರಾಜ್ಯ ಸರ್ಕಾರವು ರೈತರ ಸಾಲ ಮನ್ನಾ ಮಾಡಿರುವ ರೀತಿಯಲ್ಲೆ ನೇಕಾರರ ಸಾಲ ಮನ್ನಾ ಮಾಡಲು ಕೋರಿರುತ್ತಾರೆ.

ಈ ಮೇಲ್ಕಂಡ ಮನವಿಗಳ ಬಗ್ಗೆ ಜವಳಿ ಅಭಿವೃದ್ಧಿ ಆಯುಕ್ತರು ಹಾಗೂ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ ರವರು ಪರಿಶೀಲಿಸಿ, ರಾಜ್ಯದ ವಿವಿಧ ಜಿಲ್ಲೆಗಳಿಂದ ನೇಕಾರರು ಪಡೆದ ಸಾಲದ ಅಂಕಿ ಅಂಶಗಳ ಬಗ್ಗೆ ಮಾಹಿತಿ ಸಂಗ್ರಹಿಸಿ ರಾಜ್ಯದಲ್ಲಿ ದಿನಾಂಕ: 30.06.2017ರ ಅಂತ್ಯಕ್ಕೆ ಒಟ್ಟು 22149 ನೇಕಾರರು ಪಡೆದ ಸಾಲದ ಮೊತ್ತ ರೂ. 151.91 ಕೋಟಿಗಳಾಗಿದ್ದು, ಇದರ ಮೇಲಿನ ಒಟ್ಟು ಬಡ್ಡಿಯ ಮೊತ್ತ ರೂ. 9.81 ಕೋಟಿಗಳಾಗಿರುತ್ತದೆ. ಇದರಲ್ಲಿ 19410 ನೇಕಾರರು ಮಾತ್ರ ಸಾಲ ಮನ್ನಾ ಯೋಜನೆಗೆ ಅರ್ಹತೆ ಹೊಂದಿದ್ದು, ಇವರ ಒಟ್ಟು ಹೊರಬಾಕಿ ಸಾಲದ ಅಸಲು 80.00 ಕೋಟಿ ಮತ್ತು ಬಡ್ಡಿ ರೂ. 7.98 ಕೋಟಿ ಹೀಗೆ ಒಟ್ಟು ರೂ. 87.98 ಕೋಟಿಗಳಾಗಿರುತ್ತದೆ. ಇದರಲ್ಲಿ ಮನ್ನಾ ಮಾಡಬೇಕಾದ ಅರ್ಹತೆ ಹೊಂದಿದ ಸಾಲದ ಮೊತ್ತ ರೂ. 53.64 ಕೋಟಿಗಳೆಂದು ಜವಳಿ ಅಭಿವೃದ್ಧಿ ಆಯುಕ್ತರು ದೃಢೀಕರಿಸುತ್ತಾ, ಗರಿಷ್ಠ ರೂ. 50,000/- (ಅಸಲು ಮತ್ತು ಬಡ್ಡಿ ಸೇರಿ) ಮಾತ್ರ ಮನ್ನಾ ಮಾಡುವಂತೆ ಕೋರಿರುತ್ತಾರೆ. ವಿವರವು ಈ ಕೆಳಕಂಡಂತಿದೆ.

...2

(ರೂ. ಗಳಲ್ಲಿ)

| ಕ್ರ. ಸಂ. | ವಿವರ | ನೇಕಾರರ ಸಂಖ್ಯೆ | | ಸಾಲದ ಅಸಲು | ಸಾಲದ ಮೇಲಿನ ಬಡ್ಡಿ | ಸಾಲ ಮನ್ನಾ ಮಾಡಬೇಕಾದ ಒಟ್ಟು ಮೊತ್ತ | ಷರಾ |
|---|---|---|---|---|---|---|---|
| 1 | ದಿನಾಂಕ 30-06-2017 ರ ಅಂತ್ಯಕ್ಕೆ ಹೊರಬಾಕಿ (Outstanding) ಇರುವ ರೂ: 50,000/- ರವರೆಗೆ (ಅಸಲು ಮತ್ತು ಬಡ್ಡಿ ಸೇರಿ) ಮತ್ತು ಅದಕ್ಕಿಂತ ಕಡಿಮೆ ಸಾಲ ಪಡೆದ ನೇಕಾರರು | ಚಾಲ್ತಿ ಖಾತೆ | 9,769 | 21,94,52,572.90 | 1,46,03,806.07 | 32,90,55,061.04 | ಈ ಪ್ರಕರಣಗಳಲ್ಲಿ ಅಸಲು ಮತ್ತು ಬಡ್ಡಿ ಸೇರಿ ರೂ.50,000/- ಗಳವರೆಗೆ ಮೊತ್ತವನ್ನು ಪರಿಗಣಿಸಿದೆ. |
| | | ಒ.ಡಿ. ಖಾತೆ | 5,494 | 7,90,92,760.00 | 1,59,05,922.07 | | |
| | | ಒಟ್ಟು (ಎ) | 15,263 | 29,85,45,332.90 | 3,05,09,728.14 | | |
| | ದಿನಾಂಕ 30-06-2017 ರ ಅಂತ್ಯಕ್ಕೆ ಹೊರಬಾಕಿ (Outstanding) ಇರುವ ರೂ: 50,000/- ಕ್ಕಿಂತ (ಅಸಲು ಮತ್ತು ಬಡ್ಡಿ ಸೇರಿ) ಮೇಲ್ಪಟ್ಟು ಸಾಲ ಪಡೆದ ನೇಕಾರರು | ಚಾಲ್ತಿ ಖಾತೆ | 3045 | 37,98,16,106.20 | 2,51,57,262.55 | 20,73,50,000.0 | ಈ ಪ್ರಕರಣಗಳಲ್ಲಿ ಅಸಲು ಮತ್ತು ಬಡ್ಡಿ ಸೇರಿ ರೂ.50,000/-ಕ್ಕೂ ಹೆಚ್ಚು ಮೊತ್ತವನ್ನು ಪರಿಗಣಿಸಿದೆ. ರೂ.:50,000 ಕ್ಕಿಂತ (ಅಸಲು ಮತ್ತು ಬಡ್ಡಿ ಸೇರಿ) ಹೆಚ್ಚಿನ ಮೊತ್ತವಿದ್ದಲ್ಲಿ ನೇಕಾರರು ಹೆಚ್ಚಿನ ಮೊತ್ತವನ್ನು ಮರುಪಾವತಿಸಿದಲ್ಲಿ ಮಾತ್ರ ರೂ.50,000/- ವರೆಗಿನ ಸಾಲ ಮನ್ನಾ ಸೌಲಭ್ಯಕ್ಕೆ ಅರ್ಹರಾಗುತ್ತಾರೆ. |
| | | ಒ.ಡಿ. ಖಾತೆ | 1102 | 12,14,67,341.00 | 2,41,19,468.80 | | |
| | | ಒಟ್ಟು (ಬಿ) | 4,147 | 50,12,83,447.20 | 4,92,76,731.35 | | |
| | | ಎಲ್ಲಾ ಒಟ್ಟು (ಎ+ಬಿ) = | 19,410 | 79,98,28,780.10 | 7,97,86,459.49 | 53,64,05,061.04 | |

ಜವಳಿ ಅಭಿವೃದ್ಧಿ ಆಯುಕ್ತರ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ: ವಾಕೈ 57 ಜಕೈಯೋ 2017, ಬೆಂಗಳೂರು, ದಿನಾಂಕ: 13.12.2017**

ರಾಜ್ಯದ ನೇಕಾರರು ನೇಕಾರಿಕೆ ಉದ್ದೇಶಕ್ಕಾಗಿ ನೇಕಾರರ ಸಹಕಾರ ಸಂಘಗಳು, ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕುಗಳು, ಪಟ್ಟಣ ಸಹಕಾರಿ ಬ್ಯಾಂಕುಗಳು, ಕೃಷಿಯೇತರ ಪತ್ತಿನ ಸಹಕಾರ ಸಂಘಗಳಿಂದ ಸಾಲ ಪಡೆದು ದಿನಾಂಕ: 30.06.2017ಕ್ಕೆ ಹೊಂದಿರುವ ಹೊರಬಾಕಿಯಲ್ಲಿ ರೂ. 50,000/-ಗಳವರೆಗಿನ (ಐವತ್ತು ಸಾವಿರ ರೂಪಾಯಿಗಳು ಮಾತ್ರ) ಸಾಲ (ಅಸಲು ಮತ್ತು ಬಡ್ಡಿ ಸೇರಿ) ಮನ್ನಾ ಮಾಡಲು ಈ ಕೆಳಕಂಡ ಷರತ್ತಿಗೊಳಪಟ್ಟು ಸರ್ಕಾರವು ಮಂಜೂರಾತಿ ನೀಡಿದೆ. ಈ ಮೊತ್ತವನ್ನು 2017-18ನೇ ಸಾಲಿನ ನೇಕಾರರ ವಿಶೇಷ ಪ್ಯಾಕೇಜ್ ಯೋಜನೆಯ ಲೆಕ್ಕಶೀರ್ಷಿಕೆ 2851-00-103-0-62-106 ರಡಿಯಲ್ಲಿ ಭರಿಸತಕ್ಕದ್ದು.

**ಷರತ್ತುಗಳು:**

1. ಈ ಸೌಲಭ್ಯವು ನೇಕಾರರ ಸಹಕಾರ ಸಂಘಗಳು, ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕುಗಳು, ಪಟ್ಟಣ ಸಹಕಾರಿ ಬ್ಯಾಂಕುಗಳು, ಕೃಷಿಯೇತರ ಪತ್ತಿನ ಸಹಕಾರ ಸಂಘಗಳಿಂದ ಸಾಲ ಪಡೆದು ದಿನಾಂಕ: 30.06.2017ಕ್ಕೆ ಹೊಂದಿರುವ ಹೊರಬಾಕಿ ಸಾಲಕ್ಕೆ ಮಾತ್ರ ಅನ್ವಯವಾಗುತ್ತದೆ.

...3

2. ದಿನಾಂಕ: 30.06.2017ರವರೆಗೆ ಅಲ್ಪಾವಧಿ ನೇಕಾರರ ಸಾಲ ಪಡೆದು ದಿನಾಂಕ: 30.06.2017ಕ್ಕೆ ಹೊರಬಾಕಿ ಇರುವ ಸಾಲದ ಪೈಕಿ ರೂ. 50,000/-ವರೆಗಿನ ಸಾಲವನ್ನು (ಅಸಲು ಮತ್ತು ಬಡ್ಡಿ ಸೇರಿ) ಪೂರ್ಣ ಮನ್ನಾ ಮಾಡಲಾಗಿದೆ.

3. ಈ ಸೌಲಭ್ಯವು ನೇಕಾರರ ಸಹಕಾರ ಸಂಘಗಳು, ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕುಗಳು, ಪಟ್ಟಣ ಸಹಕಾರಿ ಬ್ಯಾಂಕುಗಳು, ಕೃಷಿಯೇತರ ಪತ್ತಿನ ಸಹಕಾರ ಸಂಘಗಳಿಂದ ವಿತರಿಸಿರುವ ಮಧ್ಯಮಾವಧಿ ಮತ್ತು ದೀರ್ಘಾವಧಿ ಸಾಲಗಳಿಗೆ ಅನ್ವಯವಾಗುವುದಿಲ್ಲ.

4. ರೂ. 50,000/-ಕ್ಕಿಂತ ಹೆಚ್ಚಿಗೆ ಅಲ್ಪಾವಧಿ ನೇಕಾರರ ಸಾಲ ಪಡೆದು ದಿನಾಂಕ: 30.06.2017ಕ್ಕೆ ಹೊರಬಾಕಿಯಿರುವ ಸಾಲವು ಚಾಲ್ತಿ ಇದ್ದಲ್ಲಿ ಸಾಲ ಪಡೆದ ನೇಕಾರರು ಗಡುವು ದಿನಾಂಕ ಅಥವಾ ದಿನಾಂಕ: 30.06.2018 ಇದರಲ್ಲಿ ಯಾವುದು ಮೊದಲೋ ಆ ದಿನಾಂಕದೊಳಗಾಗಿ ರೂ. 50,000/-ಕ್ಕಿಂತ ಹೆಚ್ಚಿನ ಅಸಲನ್ನು ಪಾವತಿ ಮಾಡಿದ್ದಲ್ಲಿ ರೂ. 50,000/-ವರೆಗಿನ ಮೊತ್ತವನ್ನು ಮನ್ನಾ ಮಾಡಲಾಗುವುದು.

5. ದಿನಾಂಕ: 30.06.2017ಕ್ಕೆ ಹೊರಬಾಕಿಯಿರುವ ಸಾಲವು ಸುಸ್ಥಿಯಾಗಿದ್ದಲ್ಲಿ ದಿನಾಂಕ: 30.06.2017ಕ್ಕೆ ಬಾಕಿ ಇರುವ ಅಸಲು ಮತ್ತು ಮರು ಪಾವತಿಸುವ ದಿನಾಂಕಕ್ಕೆ ಅನ್ವಯಿಸುವ ಬಡ್ಡಿ ಸೇರಿ ರೂ. 50,000/-ಕ್ಕಿಂತ ಹೆಚ್ಚಿನ ಮೊತ್ತವನ್ನು ಸಾಲ ಪಡೆದ ನೇಕಾರರು ದಿನಾಂಕ: 31.03.2018 ರೊಳಗಾಗಿ ಮರು ಪಾವತಿ ಮಾಡಿದಲ್ಲಿ, ಅಸಲು ಮತ್ತು ಬಡ್ಡಿ ಸೇರಿ ರೂ. 50,000/-ಗಳ ವರೆಗಿನ ಸಾಲವನ್ನು ಮನ್ನಾ ಮಾಡಲಾಗುವುದು.

6. ಯಾವುದೇ ಸದಸ್ಯರು ಒಂದಕ್ಕಿಂತ ಹೆಚ್ಚಿನ ಸಹಕಾರ ಸಂಘ / ಸಹಕಾರ ಬ್ಯಾಂಕಿನಲ್ಲಿ ಸಾಲ ಪಡೆದಿದ್ದರೆ ಒಂದು ಸಂಸ್ಥೆಯಿಂದ ಮಾತ್ರ ರೂ. 50,000/- ವರೆವಿಗೆ ಸಾಲ ಮನ್ನಾ ಸೌಲಭ್ಯ ಪಡೆಯತಕ್ಕದ್ದು.

7. ಮೇಲಿನ ಅವಧಿಯಲ್ಲಿ ಸಾಲ ಪಡೆದು ನೇಕಾರರು ಮೃತಪಟ್ಟಿದ್ದಲ್ಲಿ, ಸಂಬಂಧಿಸಿದ ವಾರಸುದಾರರು ಸಾಲ ಮರುಪಾವತಿಸಿದರೆ, ಅಂತಹ ವಾರಸುದಾರರಿಗೂ ಸಹ ಈ ಸೌಲಭ್ಯ ದೊರೆಯುತ್ತದೆ.

8. ಈ ಯೋಜನೆಯಲ್ಲಿ ಅರ್ಹವಿರುವ ರೂ. 50,000/-ಗಳ ಅಸಲು ಮತ್ತು ಸಂಬಂಧಿಸಿದ ಬಡ್ಡಿಯೊಂದಿಗೆ ಜಾರಿಯಲ್ಲಿರುವ ಬಡ್ಡಿ ಸಹಾಯಧನ ಯೋಜನೆಯಡಿಯಲ್ಲಿ ಕ್ಲೈಮ್ ಬಿಲ್ಲುಗಳನ್ನು ಸಾಲ ಮರುಪಾವತಿಸಲು ನಿಗದಿಪಡಿಸಿದ ತಿಂಗಳಿನ 30 ದಿನದೊಳಗಾಗಿ ಕ್ಲೈಮ್ ಬಿಲ್ಲುಗಳನ್ನು ಕೈಮಗ್ಗ ಮತ್ತು ಜವಳಿ ಇಲಾಖೆಯ ಜಿಲ್ಲಾ ಕಛೇರಿಗೆ ಸಲ್ಲಿಸತಕ್ಕದ್ದು.

9. ಸಾಲ ಮನ್ನಾ ಯೋಜನೆ ಅವಧಿಯ ಮುಂಚಿನ ಮತ್ತು ನಂತರದ ಅವಧಿಯ ಕ್ಲೈಮ್‌ಗಳನ್ನು ಪರಿಶೀಲನೆ / ಮಂಜೂರಾತಿಗೆ ಪರಿಗಣಿಸತಕ್ಕದ್ದಲ್ಲ ಹಾಗೂ ಒಂದೇ ಅವಧಿಯ ಕ್ಲೈಮ್ ಬಿಲ್ಲುಗಳು ಪುನರಾವರ್ತನೆ ಆಗತಕ್ಕದ್ದಲ್ಲ. ಅವಧಿ ಮೀರಿದ ಹಾಗೂ ಪುನರಾವರ್ತನೆಯಾದ ಕ್ಲೈಮ್ ಬಿಲ್ಲುಗಳು ಸ್ವೀಕೃತಿಯಾದಲ್ಲಿ ಉಂಟಾಗಬಹುದಾದ ಲೋಪಗಳಿಗೆ ಕ್ಲೈಮ್ ಬಿಲ್ಲುಗಳನ್ನು ಪರಿಶೀಲಿಸಿ ದೃಢೀಕರಿಸಿರುವ ಅಧಿಕಾರಿಗಳೇ ಪೂರ್ಣವಾಗಿ ಜವಬ್ದಾರರಾಗುತ್ತಾರೆ.

...4

10. ನೇಕಾರರ ಸಹಕಾರ ಸಂಘಗಳು, ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕುಗಳು, ಪಟ್ಟಣ ಸಹಕಾರಿ ಬ್ಯಾಂಕುಗಳು, ಕೃಷಿಯೇತರ ಪತ್ತಿನ ಸಹಕಾರ ಸಂಘಗಳು ಈ ಯೋಜನೆಗೆ ಸಂಬಂಧಿಸಿದ ಕ್ಲೈಮು ಬಿಲ್ಲುಗಳನ್ನು ಕೈಮಗ್ಗ ಮತ್ತು ಜವಳಿ ಇಲಾಖೆಯ ಜಿಲ್ಲಾ ಕಛೇರಿಗೆ ಸಲ್ಲಿಸುವುದು.

11. ಜಿಲ್ಲೆಯ ಕೈಮಗ್ಗ ಮತ್ತು ಜವಳಿ ಇಲಾಖೆಯ ಉಪ / ಸಹಾಯಕ ನಿರ್ದೇಶಕರುಗಳು ಫಲಾನುಭವಿಗಳು ಪಡೆದ ಸಾಲವು ನೇಕಾರಿಕೆ ಉದ್ದೇಶಕ್ಕಾಗಿ ಈ ಆದೇಶಕ್ಕೆ ಲಗತ್ತಿಸಿರುವ ಅನುಬಂಧದಲ್ಲಿ ತಿಳಿಸಿರುವ ನೇಕಾರಿಕೆ ಮತ್ತು ನೇಕಾರಿಕೆಗೆ ಸಂಬಂಧಿಸಿದ ಚಟುವಟಿಕೆಗಳಿಗೆ ಮಾತ್ರ ಉಪಯೋಗವಾಗಿರುವ ಬಗ್ಗೆ ಹಾಗೂ ಜಿಲ್ಲೆಯ ಲೆಕ್ಕಪರಿಶೋಧನಾ ಇಲಾಖೆಯ ಉಪ / ಸಹಾಯಕ ನಿರ್ದೇಶಕರುಗಳು ಈ ಸಾಲದ ಅಸಲು, ಬಡ್ಡಿ ಮತ್ತು ಅವಧಿಗಳ ಲೆಕ್ಕಾಚಾರದ ನಿಖರತೆಯ ಬಗ್ಗೆ ಜಂಟಿಯಾಗಿ ಪರಿಶೀಲಿಸಿ ಜಂಟಿ ದೃಢೀಕರಣದೊಂದಿಗೆ ಸಾಲ / ಬಡ್ಡಿ ಮನ್ನಾ ಕ್ಲೈಮ್ ಬಿಲ್ಲುಗಳನ್ನು ಜವಳಿ ಅಭಿವೃದ್ಧಿ ಆಯುಕ್ತರಿಗೆ ಶಿಫಾರಸ್ಸು ಮಾಡುವುದು. ಸಾಲ / ಬಡ್ಡಿ ಮನ್ನಾ ಕ್ಲೈಮ್ ಬಿಲ್ಲುಗಳನ್ನು ದೃಢೀಕರಿಸುವಲ್ಲಿ ಉಂಟಾಗಬಹುದಾದ ಲೋಪಗಳಿಗೆ ದೃಢೀಕರಿಸಿರುವ ಅಧಿಕಾರಿಗಳೇ ಪೂರ್ಣವಾಗಿ ಜವಾಬ್ದಾರರಾಗುತ್ತಾರೆ.

12. ಈ ಸಾಲ ಮನ್ನಾ ಯೋಜನೆಗೆ ಸಂಬಂಧಿಸಿದಂತೆ, ಜವಳಿ ಅಭಿವೃದ್ಧಿ ಆಯುಕ್ತರು ಆಡಳಿತಾತ್ಮಕ ಮಾರ್ಗಸೂಚಿಗಳನ್ನು ಹೊರಡಿಸಿ ಈ ಯೋಜನೆ ಪರಿಣಾಮಕಾರಿಯಾಗಿ ಜಾರಿಯಾಗುವಂತೆ ನೋಡಿಕೊಳ್ಳುವುದು.

13. ಈ ಯೋಜನೆಯ ಅನುಷ್ಠಾನದಲ್ಲಿ ತೊಂದರೆಗಳು ಕಂಡುಬಂದಲ್ಲಿ, ಈ ಬಗ್ಗೆ ತಿದ್ದುಪಡಿ ಕ್ರಮ ಕೈಗೊಳ್ಳಲು ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯು ಅಧಿಕಾರ ಹೊಂದಿರುತ್ತದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 453 ವೆಚ್ಚ-1 / 2017, ದಿನಾಂಕ 11.12.2017 ರಂದು ನೀಡಿರುವ ಸಹಮತಿ ಮತ್ತು ಮಾನ್ಯ ಮುಖ್ಯಮಂತ್ರಿಗಳು ದಿನಾಂಕ: 11.12.2017 ರಂದು ಅನುಮೋದಿಸಿರುವಂತೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ರೇವಯ್ಯ)
ಸರ್ಕಾರದ ಉಪ ಕಾರ್ಯದರ್ಶಿ (ಜವಳಿ)
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.

**ಇವರಿಗೆ,**

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು, ಇವರಿಗೆ ಕರ್ನಾಟಕ ರಾಜ್ಯಪತ್ರದಲ್ಲಿ ಕೂಡಲೇ ಪ್ರಕಟಿಸಿ, ಅದರ 250 ಪ್ರತಿಗಳನ್ನು ಒದಗಿಸಲು ಕೋರಿದೆ.

**ಪ್ರತಿಗಳು:**

1. ಪ್ರಧಾನ ಮಹಾಲೇಖಪಾಲರು (ಜಿ&ಎಸ್ಎಸ್ಎ) / (ಇ&ಆರ್ಎಸ್ಎ) (ಎ&ಇ), ಕರ್ನಾಟಕ ರಾಜ್ಯ, ಬೆಂಗಳೂರು.

...5

2. ಸನ್ಮಾನ್ಯ ಮುಖ್ಯಮಂತ್ರಿಗಳ ಪ್ರಧಾನ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
3. ಮಾನ್ಯ ಜವಳಿ ಮತ್ತು ಮುಜರಾಯಿ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸಸೌಧ, ಬೆಂಗಳೂರು.
4. ಸರ್ಕಾರದ ಮುಖ್ಯ ಕಾರ್ಯದರ್ಶಿಯವರು, ವಿಧಾನಸೌಧ, ಬೆಂಗಳೂರು.
5. ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರು, ವಿಧಾನಸೌಧ, ಬೆಂಗಳೂರು.
6. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ಬೆಂಗಳೂರು.
7. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
8. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಯೋಜನಾ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
9. ಜವಳಿ ಅಭಿವೃದ್ಧಿ ಆಯುಕ್ತರು ಹಾಗೂ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ, "ಶುಭೋದಯ ಕಾಂಪ್ಲೆಕ್ಸ್" ನಂ. 86, ರೈಲ್ವೆ ಪ್ಯಾರಲಲ್ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು-560 020.
10. ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ ವೆಚ್ಚ-1, ವಿಧಾನ ಸೌಧ, ಬೆಂಗಳೂರು.
11. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿ., ಬೆಂಗಳೂರು.
12. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಜವಳಿ ಮೂಲಸೌಲಭ್ಯ ಅಭಿವೃದ್ಧಿ ನಿಗಮ ನಿ., ಬೆಂಗಳೂರು.
13. ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ನೃಪತುಂಗ ರಸ್ತೆ, ಬೆಂಗಳೂರು.
14. ಜಂಟಿ ನಿರ್ದೇಶಕರು, ಜಿಲ್ಲಾ ಖಜಾನೆ, ಬೆಂಗಳೂರು.
15. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.